O.S. No.62/2017
PW. - 1

**ದಿನಾಂಕಃ 08-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ರವರ ಪರ ಶ್ರೀ. ಜಿ ಎ ಜಿ ವಕೀಲರಿಂದ**

ನಮ್ಮ ತಂದೆ ಜಮೀನನ್ನು ಯಾರಿಂದ ಖರೀದಿ ಮಾಡಿದ್ದರು ಎಂದು ನನಗೆ ನೆನಪಿರುವುದಿಲ್ಲ. ಆದರೆ, 1971 ಇಸವಿಯಲ್ಲಿ ನಮ್ಮ ತಂದೆ ಖರೀದಿ ಮಾಡಿದ್ದಾರೆ. ಖರೀದಿ ಮಾಡಿದ ಸಮಯದಲ್ಲಿ ಜಮೀನಿನ ಸರ್ವೇ ನಂಬರ್ ಏನು ಇತ್ತು ಎಂದು ನನಗೆ ಹೇಳಲಾಗುವುದಿಲ್ಲ, ಸಾಕ್ಷಿ ಮುಂದುವರೆದು ಈಗ ಸರ್ವೇ ನಂ.1467/ಎ ಮತ್ತು 1467/ಬಿ ಎಂದು ಇರುತ್ತದೆ ಎಂದು ಹೇಳುತ್ತಾರೆ. ಸರ್ವೇ ನಂ.1467/ಎ ಕ್ಷೇತ್ರ 9 ಎಕರೆ 3 ಗುಂಟೆ ಮತ್ತು ಸರ್ವೇ ನಂ.1467/ಬಿ ಕ್ಷೇತ್ರ 3 ಎಕರೆ 19 ಗುಂಟೆ ಇರುತ್ತದೆ. ಈಗ ಸರ್ವೇ ನಂ.1467/ಎ ದಲ್ಲಿ 5 ಎಕರೆ ಜಮೀನು ಕೊಳಚೆ ನಿರ್ಮೂಲನೆ ಮಂಡಳಿಯವರು ವಶಪಡಿಸಿಕೊಂಡಿರುತ್ತಾರೆ (Acquired). ಸರ್ವೇ ನಂ.1467/ಎ ಜಮೀನು ಉತ್ತರ ಭಾಗದಲ್ಲಿದೆ ಮತ್ತು ಸರ್ವೇ ನಂ.1467/ಬಿ ಧಕ್ಷಿಣ ಭಾಗದಲ್ಲಿದೆ. ಸರ್ವೇ ನಂ.1467/ಎ ದಲ್ಲಿ ಉತ್ತರ ಭಾಗದ 5 ಎಕರೆ ಜಮೀನನ್ನು ಕೊಳಚೆ ನಿರ್ಮೂಲನೆ ಮಂಡಳಿಯವರು ವಶಪಡಿಸಿಕೊಂಡಿರುತ್ತಾರೆ. ಕೊಳಚೆ ನಿರ್ಮೂಲನೆ ಮಂಡಳಿಯವರು ಆ ರೀತಿ ಯಾವ ವರ್ಷ ನಮ್ಮ ಜಮೀನನ್ನು ವಶಪಡಿಸಿಕೊಂಡಿದ್ದಾರೆಂದು ನನಗೆ ನೆನಪಿರುವುದಿಲ್ಲ. ಸರ್ಕಾರದವರು ಸಾರ್ವಜನಿಕರ ಭೂಮಿ ವಶಪಡಿಸಿಕೊಂಡರೆ ಅದರ ಬಗ್ಗೆ ಗೆಜೆಟ್ ನೊಟಿಫಿಕೇಷನ್ ಆಗುತ್ತದೆ ಎಂದರೆ ಸರಿ. ನಾವು ಯಾವುದೇ ಗೆಜೆಟ್ ನೋಟಿಫಿಕೇಷನ್ ಹಾಜರುಪಡಿಸಿರುವುದಿಲ್ಲ.

ಕೊಳಚೆ ನಿರ್ಮೂಲನೆ ಮಂಡಳಿಯವರು ವಶಪಡಿಸಿಕೊಂಡಿರುವ 5 ಎಕರೆ ಜಮೀನಿನ ಚೆಕ್-ಬಂದಿ ನನಗೆ ಹೇಳಲಾಗುವುದಿಲ್ಲ. ನನ್ನ ನೆನಪಿನ ಪ್ರಕಾರ ನಮ್ಮ ತಂದೆ ಒಂದೇ ಖರೀದಿ

ಪತ್ರದ ಮೂಲಕ ಜಮೀನು ಖರೀದಿ ಮಾಡಿದ್ದಾರೆ. ನಮ್ಮ ತಂದೆ ಒಟ್ಟು 12 ಎಕರೆ 22 ಗುಂಟೆ ಜಮೀನನ್ನು ಒಂದೇ ಖರೀದಿ ಪತ್ರದ ಮೂಲಕ ಖರೀದಿ ಮಾಡಿದ್ದಾರೆ. ಆ ರೀತಿ ನಮ್ಮ ತಂದೆ ಬರೆಸಿಕೊಂಡಿರುವ ಖರೀದಿ ಪತ್ರದಲ್ಲಿ 12 ಎಕರೆ 22 ಗುಂಟೆ ಜಮೀನಿನ ಚೆಕ್-ಬಂದಿ ಏನು ಬರೆದಿದ್ದಾರೆಂದು ನನಗೆ ಈಗ ಸ್ಧ್ಯ ನೆನಪಿರುವುದಿಲ್ಲ. 12 ಎಕರೆ 22 ಗುಂಟೆ ಜಮೀನಿಗೆ ನೂರುಲ್ಲಾ ಹಸನ್ ಸಾಬ್ ರವರ ಜಮೀನು ಹೊಂದಿಕೊಂಡು ಇದೇಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 12 ಎಕರೆ 22 ಗುಂಟೆ ಜಮೀನಿನಲ್ಲಿ ಎಷ್ಟು ಗುಂಟೆ ಖರಾಬ್ ಮತ್ತು ಅದು ಯಾವ ತರಹದ ಖರಾಬ್ ಎಂದು ನನಗೆ ಈಗ ನೆನಪಿರುವುದಿಲ್ಲ. ಬಿ-ಖರಾಬ್ ಎಂದರೆ ಸರ್ಕಾರಕ್ಕೆ ಸಂಬಂಧಪಟ್ಟ ಜಮೀನು ಎಂದರೆ ಸರಿ. ಕೊಳಚೆ ನಿರ್ಮೂಲನೆ ಮಂಡಳಿಯವರು 5 ಎಕರೆ ಜಮೀನು ವಶಪಡಿಸಿಕೊಂಡ ನಂತರ ನಮಗೆ 7 ಎಕರೆ 22 ಗುಂಟೆ ಜಮೀನು ಉಳಿದಿರುತ್ತದೆ. ನಾವು 2000 ನೇ ಇಸವಿಯಲ್ಲಿ ಉಳಿದಿರುವ ಜಮೀನಿನಲ್ಲಿ 6 ಎಕರೆ 19 ಗುಂಟೆ ಜಮೀನನ್ನು ಬಿನ್ ಶೇತ್ ಕಿ ಮಾಡಿಸಿರುತ್ತೇವೆ. ಬಿನ್ ಶೇತಿ ಕಿ ಮಾಡಿದ ನಂತರ ಅಂದಾಜು 32 ಗುಂಟೆ ಜಮೀನು ಧಕ್ಷಿಣ ಭಾಗದಲ್ಲಿ ಉಳಿದುಕೊಂಡಿದೆ. ಬಿನ್ ಶೇತ್ ಕಿ ಮಾಡಿದ ನಂತರ ಉಳಿದ ಜಮೀನಿನ ಬಗ್ಗೆ ನಮ್ಮ ವಾದ ಪತ್ರದಲ್ಲಿ ನಾವು ತಿಳಿಸಿರುವುದಿಲ್ಲ.

ವಾಸದ ಉದ್ದೇಶಕ್ಕಾಗಿ ಜಮೀನನ್ನು ಬಿನ್ ಶೇತ್ ಕಿ ಮಾಡಿಸಿರುತ್ತೇವೆ. ನಾವು ಜಮೀನು ಬಿನ್ ಶೇತಿ ಕಿ ಮಾಡಿಸಿದ ನಂತರ ಲೇ ಔಟ್ ಪ್ಲಾನ್ ರಾಯಚೂರು ನಗರಾಭಿವೃದ್ಧಿ ಮಂಡಳಿಯಿಂದ ಅನುಮೋದನೆ ಆಗಿತ್ತೋ ಇಲ್ಲವೋ ಎಂದು ನನಗೆ ಖಚಿತ ಮಾಹಿತಿ ಇರುವುದಿಲ್ಲ. 2000 ನೇ ಇಸವಿಯಲ್ಲಿ ಬಿನ್ ಶೇತ್ ಕಿ ಆದರೂ ಸಹ 2026 ಇಸವಿಯವರೆಗೆ ಲೇ ಔಟ್ ಪ್ಲಾನ್ ಅನುಮೋದನೆ ಆಗಿದೆಯೋ ಇಲ್ಲವೋ ಎಂದು ನನಗೆ ಖಚಿತ ಮಾಹಿತಿ ಇರುವುದಿಲ್ಲ. ಬಿನ್ ಶೇತ್ ಕಿ ಆದೇಶ ಮಾಡುವಾಗ, ಅದರಲ್ಲಿ ನಿರ್ದಿಷ್ಟ ಅವಧಿಯೊಳಗೆ ಲೇ ಔಟ್ ಪ್ಲಾನ್

ಅನುಮೋದನೆ ಮಾಡಿಸಿಕೊಳ್ಳಬೇಕೆಂದು ಕರಾರು ಇರುತ್ತದೆ ಎಂದರೆ ಸರಿ. ಎಷ್ಟು ಅವಧಿಯಲ್ಲಿ ಲೇ ಔಟ್ ಪ್ಲಾನ್ ಅನುಮೋದನೆ ಮಾಡಿಸಿಕೊಳ್ಳಬೇಕೆಂದು ಅದರಲ್ಲಿ ನಮೂದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಒಂದು ವೇಳೆ ನಿರ್ದಿಷ್ಟ ಅವಧಿಯಲ್ಲಿ ಲೇ ಔಟ್ ಪ್ಲಾನ್ ಅನುಮೋದನೆ ಆಗದೇ ಇದ್ದರೆ ಬಿನ್ ಶೇತ್ ಕಿ ಆದೇಶ ರದ್ದುಗೊಳ್ಳುತ್ತದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಬಿನ್ ಶೇತಿ ಕಿ ಅರ್ಜಿಯ ಜೊತೆಗೆ ನಾವು ಜಮೀನಿಗೆ ಬಂದು ಸೇರುವ ಒಂದು ರಸ್ತೆಯನ್ನು (Approach Road) ಕಾಣಿಸಿ, ಒಂದು ನಕಾಶೆಯನ್ನು ಸಲ್ಲಿಸಬೇಕಾಗುತ್ತದೆ ಎಂಬ ಪ್ರಶ್ನೇಗೆ ಸಾಕ್ಷಿಯು ನಮ್ಮ ತಂದೆಯವರು ಆ ರೀತಿ ಒಂದು ನಕಾಶೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು ಎಂದು ಹೇಳುತ್ತಾರೆ. ಆ ರೀತಿ ನಮ್ಮ ತಂದೆ ಸರ್ಕಾರಕ್ಕೆ ಸಲ್ಲಿಸಿದ ನಕಾಶೆ ದಾಖಲೆಯನ್ನು ನಾವು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ನಾವು ಬಿನ್ ಶೇತ್ ಕಿ ಆದೇಶದ ಪ್ರತಿಯನ್ನು ಹಾಜರುಪಡಿಸಿರುತ್ತೇವೆ. ನಾವು ಉದ್ದೇಶಪೂರ್ವಕವಾಗಿ ಗೆಜೆಟ್ ನೊಟಿಫಿಕೇಷನ್ ಮತ್ತು ನಕಾಶೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದು ಉದ್ದೇಶಪೂರ್ವಕವಾಗಿ ಅಲ್ಲ, ಆದರೆ ಆ ದಾಖಲೆಗಳನ್ನು ಹಾಜರುಪಡಿಸುವ ಅವಶ್ಯಕತೆ ಇದೆ ಎಂದು ನನಗೆ ಅನ್ನಿಸಿರುವುದಿಲ್ಲ ಎಂದು ಹೇಳುತ್ತಾರೆ.

ಬಿನ್ ಶೇತ್ ಕಿ ಮಾಡಿಸುವಾಗ ನಮ್ಮ ಜಮೀನನ್ನು ಸರ್ವೇ ಮಾಡಿಸಿದ್ದಾರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಅದನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು, ನಾವು ಅವರ ಕೆಲಸ ಕಾರ್ಯಗಳಲ್ಲಿ ಭಾಗವಹಿಸುತ್ತಿರಲಿಲ್ಲ ಎಂದು ಹೇಳುತ್ತಾರೆ. 2016 ನೇ ಇಸವಿಯಲ್ಲಿ ನಾವು ಜಮೀನಿನ ಸರ್ವೇ ಮಾಡಿಸಿರುತ್ತೇವೆ. 2016 ನೇ ಇಸವಿಯಲ್ಲಿ ನಾವು ಜಮೀನು ಸರ್ವೇ ಮಾಡಿಸುವ ಮೊದಲೇ ಅದು ಬಿನ್ ಶೇತ್ ಕಿ ಆಗಿತ್ತು. ನಾವು ಕಂದಾಯ ಇಲಾಖೆಯವರಿಂದ ಜಮೀನನ್ನು ಸರ್ವೇ ಮಾಡಿಸಿರುತ್ತೇವೆ. ಬಿನ್ ಶೇತ್ ಕಿ ಆದ ನಂತರ

ಜಮೀನು ಕಂದಾಯ ಜಮೀನು ಆಗಿರದೇ ಇರುವ ಕಾರಣಕ್ಕೆ ಅದು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೇ ಯಾವ ದಿನಾಂಕದಂದು ಮತ್ತು ಯಾರು ಮಾಡಿದ್ದಾರೆಂದು ನನಗೆ ನೆನಪಿರುವುದಿಲ್ಲ. ಸರ್ವೇ ಮಾಡಿಸಲು ನಮ್ಮ ತಂದೆ ಅರ್ಜಿ ಸಲ್ಲಿಸಿದ್ದರು. ಸರ್ವೇ ಮಾಡುವಾಗ ಅಕ್ಕ-ಪಕ್ಕ ಜಮೀನಿನ ಮಾಲೀಕರಿಗೆ ನೋಟಿಸ್ ಕೊಟ್ಟಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ, ಅದೇ ರೀತಿ ನಾವು ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೂ ಸಹ ಅದರ ಬಗ್ಗೆ ಗೊತ್ತಾಗುವುದಿಲ್ಲ. ಸರ್ವೇ ವರದಿ ದಿಃ 29.02.2016 ರಂದು ಕೊಟ್ಟಿರುತ್ತಾರೆ. ಸರ್ವೇ ವರದಿಯಲ್ಲಿ 30 ಗುಂಟೆ ಅತಿಕ್ರಮಣ ಆಗಿದೆ, ಅದರಲ್ಲಿ ಕೆಲವೊಂದು ಗುಡಿಸಲುಗಳು ಮತ್ತು ಅದಿತಿ ಆಸ್ಪತ್ರೆ ಇದೆ ಎಂದು ನಮೂದಾಗಿದೆ. ಎಷ್ಟು ಗುಡಿಸಲುಗಳು ಮತ್ತು ಅವು ಯಾರಿಗೆ ಸಂಬಂಧಪಟ್ಟಿದ್ದು ಎಂದು ವರದಿಯಲ್ಲಿ ನಮೂದಿಸಿರುವುದಿಲ್ಲ. ನಂತರ ನಾವು ಆ 30 ಗುಂಟೆಯಲ್ಲಿ ಎಷ್ಟು ಗುಡಿಸಲು ಮತ್ತು ಯಾರಿಗೆ ಸಂಬಂಧಪಟ್ಟಿದ್ದಾವೆಂದು ಹಾಗೂ ಅವರ ದೂರವಾಣಿ ಸಂಖ್ಯೆಗಳನ್ನು ಸಹ ನಾವು ಯಾದಿ ಮಾಡಿರುತ್ತೇವೆ. ನಾವು ಆ ರೀತಿ ಮಾಡಿರುವ ಯಾದಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ನಮ್ಮ ವಾದ ಪತ್ರದಲ್ಲಿ ನಾವು ಎಷ್ಟು ಗುಡಿಸಲುಗಳಿವೆ, ಅವು ಯಾರಿಗೆ ಸಂಬಂಧಪಟ್ಟಿದ್ದು ಮತ್ತು ಅದರ ಬಗ್ಗೆ ನಾವು ಯಾದಿ ತಯಾರಿಸಿದ ಬಗ್ಗೆ ನಮೂದಿಸಿರುವುದಿಲ್ಲ. ನಾವು ತಯಾರಿಸಿದ ಯಾದಿ ಏಕೆ ಹಾಜರುಪಡಿಸಿಲ್ಲ ಎಂದರೆ, ನಂತರ ನಾವು ನಮ್ಮ ಜಮೀನಿನಲ್ಲಿ ಗುಡಿಸಲು ಹಾಕಿರುವವರನ್ನು ಬೇಟಿಯಾದಾಗ ಕೆಲವೊಬ್ಬರು ಆಗಲೇ ಖಾಲಿ ಮಾಡಿದರು ಮತ್ತು ಇನ್ನುಳಿದ ಜನರಲ್ಲಿ ಹೆಚ್ಚಿನ ಜನರು ನಾವು ಕೇಳಿದಾಗ ಖಾಲಿ ಮಾಡುತ್ತೇವೆಂದು ಹೇಳಿದರು, ಆದ ಕಾರಣ ಯಾದಿಯನ್ನು ಹಾಜರುಪಡಿಸಿರುವುದಿಲ್ಲ. ಅದರ ಬಗ್ಗೆ ಪ್ರತಿವಾದಿಯನ್ನು ಸಹ ಕೇಳಿದಾಗ ಅವರು ಯಾವುದೇ

ರೀತಿ ಪ್ರತಿಕ್ರಿಯೇ ನೀಡಲಿಲ್ಲ, ಅದರ ನಂತರ ನಾವು ಅವರಿಗೆ ವಕೀಲರ ಮೂಲಕ ನೋಟಿಸ್ ಕಳುಹಿಸಿರುತ್ತೇವೆ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**